

# ಈ ತಿಂಡಿ ಸವಿಯಿರಿ.. ಕಣ್ಣಿಂದ!

ಇಲ್ಲಿ ಕಾಣುತ್ತಿರುವ ತಿನ್ನ ಬಹುದಾದ ವಸ್ತುಗಳನ್ನು ನೋಡಿರಿ. ಇವುಗಳನ್ನು ಮರದಿಂದ ತಯಾರಿಸಿರುವುದೆಂದು ತಿಳಿದರೆ ಎಲ್ಲರೂ ವಿಸ್ಮಯಗೊಳ್ಳುವುದು ಖಂಡಿತ. ಹೌದು, ಮರದ ತುಂಡುಗಳನ್ನು ನಾಜೂಕಾಗಿ ಕೆತ್ತಿ ಅದಕ್ಕೆ ತಕ್ಕಂತೆ ಬಣ್ಣ ಹಚ್ಚಿ ಅದು ನಿಜವಾದ ತಿನಿಸೇನೋ ಎಂಬಂತೆ ಮಾಡುವುದರಲ್ಲಿ ಬಲು ನಿಷ್ಣಾತನಾಗಿದ್ದಾನೆ ಜಪಾನ್ ದೇಶದ ಕಲಾವಿದನೊಬ್ಬ.

ಸೈಜಿ ಕವಸಾಕಿ ಹೆಸರಿನ ಈ ಕಲಾವಿದ ತಾನು ತಯಾರಿಸಿದ ಮರದ ತಿನಿಸುಗಳನ್ನು ಟ್ವಿಟರ್, ಇನ್ ಸ್ಟಾಗ್ರಾಂ ನಲ್ಲಿ ಪೋಸ್ಟ್ ಮಾಡಿದ ನಂತರ ಇಂಟರ್ನೆಟ್ ನಲ್ಲಿ ಎಲ್ಲರ ಗಮನವೂ ಇವನತ್ತ ನೆಟ್ಟಿತಂತೆ. ಈತ ತಯಾರಿಸಿದ ಚಿಪ್ಸ್, ಮೀನು, ಬೇಕರಿ ತಿನಿಸುಗಳು ಮುಂತಾದವುಗಳೆಲ್ಲಾ ಜಪಾನ್ ದೇಶದ ಟಿ ವಿ, ಮಾಧ್ಯಮ ಹಾಗೂ ಇತರೇ ದೇಶಗಳಲ್ಲಿ ಪ್ರದರ್ಶನ ಕಂಡಿವೆ. ಈಗಾಗಲೇ ಪ್ರಪಂಚದಾದ್ಯಂತ ಹಲವಾರು ಜನರು ಕವಾಸಾಕಿ ತಿನಿಸುಗಳನ್ನು (ಕಣ್ಣಿಂದ) ಸವಿದಿದ್ದಾರೆ!

ಮರದ ತುಂಡನ್ನು ತಿನಿಸನ್ನಾಗಿ ಮಾರ್ಪಡಿಸಲು ಸೈಜಿ ಕವಾಸಾಕಿಗೆ 2 ರಿಂದ 3 ಗಂಟೆ ಸಾಕಂತೆ. ಆದರೆ ತುಂಡು ಮರವನ್ನು ಕೆತ್ತಿ ಅಕ್ರಿಲಿಕ್ ಪೇಂಟ್ ಮಾಡಿ ಅದನ್ನು ಥೇಟ್ ತಿನ್ನುವ ವಸ್ತುವನ್ನಾಗಿ ಮಾರ್ಪಡಿಸಲು ಈ ಸಮಯ ಬಹಳ ಕಡಿಮೆಯೇನೋ ಎಂದೆನಿಸುತ್ತದೆ. ತಿನ್ನುವ ಪದಾರ್ಥಗಳಲ್ಲದೆ ನಾಯಿ, ಮಿನಿಯೇಚರ್ ಟ್ರಾಫಿಕ್ ಲೈಟ್ ಮುಂತಾದವುಗಳನ್ನೂ ಮರದಿಂದ ಅತ್ಯದ್ಭುತವಾಗಿ ಸೃಷ್ಟಿಸಿ ಕವಾಸಾಕಿ ಸಾಕಷ್ಟು ಪ್ರಶಂಸೆ ಗಳಿಸಿದ್ದಾನೆ.

■ ಪ್ರಿಯಾಂಕ. ವಿ.ಎಚ್



